# ಮಕ್ಕಳ ಹೊರೆಗೆ ಕೊನೆಯೆಲ್ಲಿ?

ಪಠ್ಯಪುಸ್ತಕಗಳನ್ನೂ ಮೂರು ಸೆಮಿಸ್ಟರ್‌ಗೆ ತಕ್ಕಂತೆ ಮೂರು ಭಾಗಗಳನ್ನಾಗಿ ಪ್ರಕಟಿಸಿದರೆ ಒಳ್ಳೆಯದು. ಆಗ ಇಡೀ ವರ್ಷದ ಪಠ್ಯಪುಸ್ತಕಗಳನ್ನು ಹೊರುವ ಬದಲು ಆಯಾ ಸೆಮಿಸ್ಟರ್ ಪಠ್ಯಗಳನ್ನು ಮಾತ್ರ ಕೊಂಡೊಯ್ಯಬಹುದು. ಪ್ರತಿದಿನ ನೋಟ್ಸ್‌ಗಳನ್ನು ಎ4 ಬಿಳಿಹಾಳೆಗಳಲ್ಲಿ ಬರೆಸಿದರೆ ಆ ಬಳಿಕ ಅವುಗಳನ್ನು ಫೈಲ್ ಮಾಡಿ ಒಟ್ಟಿಗೆ ಇಟ್ಟುಕೊಳ್ಳಬಹುದು.

ಮಹಾರಾಷ್ಟ್ರದ ಚಂದ್ರಾಪುರದಲ್ಲಿ ಏಳನೇ ತರಗತಿಯ ಇಬ್ಬರು ವಿದ್ಯಾರ್ಥಿಗಳು ಪ್ರೆಸ್‌ಕ್ಲಬ್‌ಗೆ ಹೋಗಿ ಪತ್ರಿಕಾಗೋಷ್ಠಿ ನಡೆಸಿ ತಮ್ಮ ಶಾಲಾ ಬ್ಯಾಗುಗಳ ಹೊರೆಯನ್ನು ಕಡಿಮೆ ಮಾಡಿಸಿ ಎಂದು ಅಲವತ್ತುಕೊಂಡ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. 'ಪ್ರತಿದಿನ 5ರಿಂದ 7 ಕೆಜಿಯಷ್ಟು ಭಾರದ ಶಾಲಾ ಚೀಲ ಹೊತ್ತು ಹೋಗುವುದು ಕಷ್ಟವಾಗುತ್ತಿದೆ. ಪ್ರತಿದಿನ ಎಂಟು ವಿಷಯಗಳಿಗೆ ಸಂಬಂಧಿಸಿ ಕನಿಷ್ಠ 16 ಪುಸ್ತಕಗಳು ಇರುತ್ತವೆ. ಕೆಲವೊಮ್ಮೆ ಒಟ್ಟು ಪುಸ್ತಕಗಳ ಸಂಖ್ಯೆ 20 ದಾಟುತ್ತದೆ. ಇದನ್ನು ಹೊತ್ತು ಶಾಲೆಯ ಮೂರನೇ ಮಹಡಿಯಲ್ಲಿರುವ ನಮ್ಮ ತರಗತಿಗೆ ಮೆಟ್ಟಿಲು ಹತ್ತಬೇಕು' ಎಂದು ಇಬ್ಬರು ಹುಡುಗರು ಅಳಲು ತೋಡಿಕೊಂಡಿದ್ದಾರೆ.

ಇದು ಮಹಾರಾಷ್ಟ್ರ ರಾಜ್ಯವೊಂದರ ಪ್ರಶ್ನೆ ಅಲ್ಲ, ಎಲ್ಲ ರಾಜ್ಯಗಳಲ್ಲೂ ಶಾಲಾ ಮಕ್ಕಳ ಪುಸ್ತಕದ ಹೊರೆ ಜಾಸ್ತಿಯಾಗಿದೆ. ಕರ್ನಾಟಕದಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಬೆಂಗಳೂರು ನಗರದಲ್ಲಿ ಡಿಎಸ್‌ಇಆರ್‌ಟಿ ಸಂಸ್ಥೆಯು ರಾಷ್ಟ್ರೀಯ ಕಾನೂನು ಶಾಲೆ ಯ ಜತೆ ಸೇರಿ ನಡೆಸಿದ ಸಮೀಕ್ಷೆಯ ಪ್ರಕಾರ, ರಾಜ್ಯದ ಏಯ್ಡೆಡ್ ಶಾಲೆಗಳ ಮಕ್ಕಳ ಬ್ಯಾಗ್ ಸರಾಸರಿ 5.6 ಕೆಜಿ ಯಷ್ಟು ಭಾರವಿದೆ. ಐಸಿಎಸ್‌ಇ, ಕೇಂದ್ರೀಯ ವಿದ್ಯಾಶಾಲೆ ಮತ್ತು ರಾಜ್ಯ ಸಿಲೆಬಸ್‌ನ ಏಯ್ಡೆಡ್ ಶಾಲೆಗಳ ಸುಮಾರು 1000 ಮಕ್ಕಳನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿತ್ತು. ಈ ಸಮೀಕ್ಷೆಯ ಪ್ರಕಾರ ಸರ್ಕಾರಿ ಶಾಲೆಗಳೇ ವಾಸಿ. ಅಲ್ಲಿ ಮಕ್ಕಳ ಪುಸ್ತಕದ ಚೀಲದ ಭಾರ ಸರಾಸರಿ 3.7 ಕೆ.ಜಿ ಯಂತೆ. ಖಾಸಗಿ ಶಾಲೆಗಳ ಪ್ರತಿಷ್ಠೆಗೆ ತಕ್ಕಂತೆ ಪುಸ್ತಕದ ಹೊರೆಯೂ ಹೆಚ್ಚಾಗುತ್ತಾ ಹೋಗುತ್ತಿದೆ!

'ಮಕ್ಕಳನ್ನು ಭಾರ ಹೊರುವ ಕೂಲಿಯಾಳುಗಳಂತೆ ಭಾವಿಸದಿರಿ; ಅವರ ಹೊರೆಯನ್ನು ಕಡಿಮೆ ಮಾಡಿ' ಎಂದು ತಜ್ಞರು, ಸಮಾಜ ವಿಜ್ಞಾನಿಗಳು, ಪೋಷಕರು ಹಲವು ವರ್ಷಗಳಿಂದ ಕೇಳಿಕೊಳ್ಳುತ್ತಿದ್ದಾರೆ. ಕೆಲವು ಸುಧಾರಣೆಗಳ ಬಗ್ಗೆ ಚರ್ಚೆ ನಡೆದರೂ ಅಂತಿಮವಾಗಿ ಹೊರೆ ಹೆಚ್ಚುತ್ತಲೇ ಇದೆ. ಹೈಸ್ಕೂಲ್‌ಗಳಲ್ಲಿ ಪ್ರತಿದಿನ 6ರಿಂದ 8 ವಿಷಯಗಳ ಪಾಠ ಮಾಡಲಾಗುತ್ತದೆ. ಈ ವಿಷಯದ ಪಠ್ಯಪುಸ್ತಕಗಳು ಸಾಕಷ್ಟು ದಪ್ಪ ಇರುತ್ತವೆ. ಜತೆಗೆ ಒಂದು ವಿಷಯಕ್ಕೆ ಮೂರು ನೋಟ್ಸ್‌ಗಳಂತೆ ಇತರ ಪುಸ್ತಕಗಳು. ಟಿಫನ್ ಬಾಕ್ಸ್, ನೀರಿನ ಬಾಟಲಿ, ಪೆನ್ಸಿಲ್ ಬಾಕ್ಸ್. ಜತೆಗೆ ಕೆಲವು ಮಕ್ಕಳಿಗೆ ಕ್ರೀಡಾ ಸಲಕರಣೆಗಳ ಅಥವಾ ಸಂಗೀತ ಉಪಕರಣಗಳ ಭಾರ. ಕೆಲವೊಮ್ಮೆ ಕಥೆ ಪುಸ್ತಕಗಳು ಹಾಗೂ ಇತರ ಪುಸ್ತಕಗಳು. ಬಹುತೇಕ ಶಾಲೆಗಳು 3–4 ಮಹಡಿ ಹೊಂದಿದ್ದು ಈ ಭಾರವನ್ನು ಹೊತ್ತು ಮೆಟ್ಟಿಲು ಹತ್ತಬೇಕು. ಬೆನ್ನು, ಹೆಗಲು ನೋವು; ಜತೆಗೆ ಮಾನಸಿಕ ಒತ್ತಡ. ಕೃಶಕಾಯ ಮಕ್ಕಳ ಪಾಡು ಹೇಳುವುದೇ ಬೇಡ. ಹೀಗಾದರೆ ಶಾಲೆಗೆ ಹೋಗುವುದು ಮಕ್ಕಳಿಗೆ ಸಂತೋಷದ ಸಂಗತಿ ಆಗುವುದಾದರೂ ಹೇಗೆ?

ಮಕ್ಕಳ ಶಾಲಾ ಹೊರೆಯನ್ನು ಕಡಿಮೆ ಮಾಡಲು ಹಲವು ದಾರಿಗಳಿವೆ. ಪ್ರತಿದಿನ 6 ಅಥವಾ 8 ವಿಷಯಗಳ ಪಾಠ ಮಾಡುವ ಬದಲು 3 ಅಥವಾ 4 ವಿಷಯಗಳ ಪಾಠ ಮಾತ್ರ ಮಾಡಿದರೆ ಅಷ್ಟರ ಮಟ್ಟಿಗೆ ಪಠ್ಯ ಮತ್ತು ನೋಟ್ಸ್ ಪುಸ್ತಕಗಳನ್ನು ಹೊರುವ ಕಷ್ಟ ತಪ್ಪುತ್ತದೆ. ಪಠ್ಯಪುಸ್ತಕಗಳನ್ನೂ ಮೂರು ಸೆಮಿಸ್ಟರ್‌ಗೆ ತಕ್ಕಂತೆ ಮೂರು ಭಾಗಗಳನ್ನಾಗಿ ಪ್ರಕಟಿಸಿದರೆ ಒಳ್ಳೆಯದು. ಆಗ ಇಡೀ ವರ್ಷದ ಪಠ್ಯಪುಸ್ತಕಗಳನ್ನು ಹೊರುವ ಬದಲು ಆಯಾ ಸೆಮಿಸ್ಟರ್ ಪಠ್ಯಗಳನ್ನು ಮಾತ್ರ ಕೊಂಡೊಯ್ಯಬಹುದು. ಪ್ರತಿದಿನ ನೋಟ್ಸ್‌ಗಳನ್ನು ಎ4 ಬಿಳಿಹಾಳೆಗಳಲ್ಲಿ ಬರೆಸಿದರೆ ಆ ಬಳಿಕ ಅವುಗಳನ್ನು ಫೈಲ್ ಮಾಡಿ ಒಟ್ಟಿಗೆ ಇಟ್ಟುಕೊಳ್ಳಬಹುದು. ತರಗತಿಯಲ್ಲೇ ಮಕ್ಕಳಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಆಗುವುದಿಲ್ಲವೆ? ಪಠ್ಯಪುಸ್ತಕಗಳನ್ನು ಈಗಿನಂತೆ ದಪ್ಪ ಹಾಳೆಗಳಲ್ಲಿ ಮುದ್ರಿಸುವ ಬದಲು ಇಂಗ್ಲಿಷ್ ಕಾದಂಬರಿಗಳಂತೆ ಹಗುರ ಹಾಳೆಗಳಲ್ಲಿ ಮುದ್ರಿಸಲು ಸಾಧ್ಯವಿಲ್ಲವೆ?

ಕೇರಳದಲ್ಲಿ ಶಾಲಾ ಮಕ್ಕಳ ಹೊರೆಯನ್ನು ಕಡಿಮೆ ಮಾಡುವಂತೆ ಸ್ವತಃ ಮಾನವ ಹಕ್ಕುಗಳ ಆಯೋಗವೇ ಹಸ್ತಕ್ಷೇಪ ನಡೆಸಿ ಸ್ಪಷ್ಟ ಸೂಚನೆ ನೀಡಿತ್ತು. ಆ ಬಳಿಕವೂ ಹೆಚ್ಚಿನ ಸುಧಾರಣೆ ಆದಂತೆ ಕಾಣುತ್ತಿಲ್ಲ. ಮಕ್ಕಳ ಬಗ್ಗೆ ನಮಗೆ ಎಳ್ಳಷ್ಟೂ ಕನಿಕರ ಇಲ್ಲವೆ?

■ ಬಿ.ಎಂ.ಹನೀಫ್

